International Journal of Kannada Research
www.kannadajournal.com

ISSN: 2454–5813
IJKR 2022; 8(3): 26-29
© 2022 IJKR
www.kannadajournal.com
Received: 01-06-2022
Accepted: 04-07-2022

**ರಮಜಾನಬಿ ತಹಶೀಲ್ದಾರ**
ಸಂಶೋಧನಾ ವಿದ್ಯಾರ್ಥಿನಿ, ಕನ್ನಡ ಅಧ್ಯಯನ ವಿಭಾಗ ಕರ್ನಾಟಕ ರಾಜ್ಯ ಅಕ್ಕಮಹಾದೇವಿ, ಮಹಿಳಾ ವಿಶ್ವವಿದ್ಯಾನಿಲಯ, ವಿಜಯಪೂರ, ಕರ್ನಾಟಕ, ಭಾರತ

Corresponding Author:
**ರಮಜಾನಬಿ ತಹಶೀಲ್ದಾರ**
ಸಂಶೋಧನಾ ವಿದ್ಯಾರ್ಥಿನಿ, ಕನ್ನಡ ಅಧ್ಯಯನ ವಿಭಾಗ ಕರ್ನಾಟಕ ರಾಜ್ಯ ಅಕ್ಕಮಹಾದೇವಿ, ಮಹಿಳಾ ವಿಶ್ವವಿದ್ಯಾನಿಲಯ, ವಿಜಯಪೂರ, ಕರ್ನಾಟಕ, ಭಾರತ

# ಡಾ. ಜಿ.ಪಿ. ರಾಜರತ್ನಂ ಅವರ ಮಕ್ಕಳ ಕವಿತೆಗಳ ವೈವಿಧ್ಯತೆ

**ರಮಜಾನಬಿ ತಹಶೀಲ್ದಾರ**

ಆಧುನಿಕ ಕನ್ನಡ ಸಾಹಿತ್ಯ ಪರಂಪರೆಯು ಹಲವು ಸಾಹಿತ್ಯ ಚಳುವಳಿಗಳ ಅಂದರೆ ನವೋದಯ, ಪ್ರಗತಿಶೀಲ, ನವ್ಯ, ದಲಿತ, ಬಂಡಾಯಗಳ ಮೂಲಕ ಬೆಳೆದು ಬಂದಿದೆ. ಆದರೆ ಇದಾವುದರ ಪರಿವೆಯಿಲ್ಲದೆ ಕನ್ನಡದಲ್ಲಿ ಬೆಳೆದ 'ಮಕ್ಕಳ ಸಾಹಿತ್ಯ' ಅದಕ್ಕೆ ಸಮಾನಾಂತರವಾಗಿ ಅಂದಂದಿನ ಅಗತ್ಯಗಳಿಗುಣವಾಗಿ ರೂಪಗೊಳ್ಳುತ್ತ ಬಂದಿದೆ.

'ಬಣ್ಣದ ತಗಡಿನ ತುತ್ತೂರಿ' ಪದ್ಯವನ್ನು ಕಲಿಯದ ಕಲಿತು ನಲಿಯದ ಕನ್ನಡದ ಶಾಲಾ ಮಕ್ಕಳಿಲ್ಲ, ಅದರ ಕರ್ತೃ ಗುಂಡ್ಲುಪೇಟೆಯ ರಾಜರತ್ನಂ. ಶಿಶುಸಾಹಿತ್ಯಕ್ಕೆ ಮೌಲಿಕ ಕೊಡುಗೆ ನೀಡಿದ ಕೆಲವೇ ಸಾಹಿತಿಗಳಲ್ಲಿ ಜಿ.ಪಿ.ರಾಜರತ್ನಂ ಅವರ ಹೆಸರು ಪ್ರಖರವಾಗಿ ಕಾಣುತ್ತದೆ.

ರಾಜರತ್ನಂ ಅವರು ಆಕರ್ಷಕವಾದ ಶಬ್ದಗಳಿಂದ ಮಕ್ಕಳ ಮನಸ್ಸನ್ನು ಸೆಳೆಯುವ ಪ್ರಾಸಮಯ ಪದ್ಯಗಳಲ್ಲಿ ನೀತಿಯನ್ನು ತುಂಬಿ ಸಾಹಿತ್ಯ ರಚನೆ ಮಾಡಿರುವುದು ರಾಜರತ್ನಂ ಅವರ ಪ್ರೌಢಿಮೆಗೆ ಸಾಕ್ಷಿ. ಹಾಡು ಎಂದರೆ ಮಕ್ಕಳಿಗೆ ತುಂಬಾ ಇಷ್ಟ ಅದರಲ್ಲೂ ಹಾಡಿಕೊಂಡು ನಟನೆಮಾಡಿಕೊಂಡು ಪದ್ಯ ಹೇಳಬೇಕೆಂದರೆ ಮಕ್ಕಳಿಗೆ ಮತ್ತಷ್ಟೂ ಖುಷಿ ಮಕ್ಕಳ ಇಷ್ಟಕ್ಕೆ ತಕ್ಕಂತೆ ಮಕ್ಕಳ ಪದ್ಯಗಳನ್ನು ರಾಜರತ್ನಂ ರಚಿಸಿದ್ದಾರೆ.

ಪ್ರಾಚೀನ ಕಾಲದ ಕವಿ ಪಂಪನಿಂದ ಹಿಡಿದು ಇಂದಿನವರೆಗೂ ಕನ್ನಡ ಸಾಹಿತ್ಯದಲ್ಲಿ ವಸ್ತು ಭಾಷೆ, ತಂತ್ರ, ಹಾಗೂ ಮಾನವೀಯ ಮೌಲ್ಯಗಳ ಹುಡುಕಾಟದ ಪ್ರಯೋಗಗಳು ನಿರಂತರವಾಗಿ ನಡೆಯುತ್ತಲೇ ಬಂದಿವೆ. ಒಂದು ಕೃತಿಯ ಯಶಸ್ಸಿನ ಮೆಟ್ಟಿಲುಗಳಾದ ಇವು ಆಯಾ ಕವಿಯ ಜಾಣ್ಮೆಯನ್ನು ಕೌಶಲ್ಯವನ್ನು ಅವಲಂಬಿಸಿರುತ್ತವೆ. ಯಾವುದೇ ಪ್ರಕಾರದ ಸಾಹಿತ್ಯ ಅದು ಯಶಸ್ವಿಯಾಗಬೇಕಾದರೆ ಅದರಲ್ಲಿ ಮೂಲವಸ್ತು, ವಿಷಯ, ಮುಖ್ಯಪಾತ್ರ ವಹಿಸುತ್ತದೆ.

ಪ್ರೌಢ ಸಾಹಿತ್ಯದ ವಸ್ತುವಿಗೂ ಮಕ್ಕಳ ಸಾಹಿತ್ಯದ ವಸ್ತುವಿಗೂ ಬಹಳ ವ್ಯತ್ಯಾಸಗಳಿವೆ. ಪ್ರೌಢ ಸಾಹಿತ್ಯವು ತನ್ನ ರಚನಾ ವಿಧಾನಗಳಿಂದಾಗಿ ಒಂದು ಬಗೆಯದಾದರೆ, ಮಕ್ಕಳ ಸಾಹಿತ್ಯ ಅದೇ ರಚನಾ ವಿಧಾನಗಳಿಂದಾಗಿದ್ದರೂ ಅದರ ಅಂತರಂಗದ ಆಶಯಗಳು ಮತ್ತು ವಿಷಯ ವಸ್ತುಗಳು ಎಲ್ಲವೂ ಬೇರೆ–ಬೇರೆ ಬಗೆಯದಾಗಿರುತ್ತದೆ. ಹೀಗಾಗಿಯೇ ಸಾಹಿತ್ಯ ಸೃಷ್ಟಿಗೆ ಒಂದು ಪ್ರತಿಭೆ ಸಾಕಾದೀತು, ಆದರೆ ಮಕ್ಕಳ ಸಾಹಿತ್ಯ ಸೃಷ್ಟಿಗೆ ಇಮ್ಮಡಿ ಪ್ರತಿಭೆಯ ಅವಶ್ಯಕತೆ ಇದೆ. ಮಕ್ಕಳ ಸಾಹಿತಿಯಾದವರು ಏಕಕಾಲಕ್ಕೆ ಪ್ರೌಢ ಪ್ರತಿಭೆಯೊಂದಿಗೆ ತನ್ನ ಕಳೆದು ಹೋದ ಬಾಲ್ಯವನ್ನು ನೆನಪಿಸಿಕೊಳ್ಳುತ್ತಾ ಮೇಳವಿಸಿ ಕೃತಿ ರಚಿಸಬೇಕಾಗಿರುವುದರಿಂದ ಮಕ್ಕಳ ಸಾಹಿತ್ಯ ಸೃಷ್ಠಿ ಮಾಡುವ ಲೇಖಕ ಅತ್ಯಂತ ಸೂಕ್ಷಮತಿಯೂ ವಿಚಾರವಂತರು, ವೈಚಾರಿಕ ಪ್ರಜ್ಞೆಯುಳ್ಳವರುವೈಜ್ಞಾನಿಕ ಮನೋಧರ್ಮವನ್ನು ಹೊಂದಿದವರು ಆಗಿರಬೇಕಾಗುತ್ತದೆ.

## ವಸ್ತು

ಮಕ್ಕಳ ಸಾಹಿತ್ಯದ ವಸ್ತುವಿನ ಆಯ್ಕೆ ಮಗುವಿನ ಬುದ್ಧಿಶಕ್ತಿಗೆ ಅನುಗುಣವಾಗಿರುತ್ತದೆ. ಸಾಮಾನ್ಯವಾಗಿ ಮಗುವಿನ ಬುದ್ಧಿಶಕ್ತಿ ಅನುವಂಶಿಕತೆಯ ರೀತಿಯಲ್ಲಿ ಅವನ ಪರಿಸರ ಪ್ರಜ್ಞೆ ಪರಿಸರದ ಶ್ರೇಷ್ಠತೆ ಹಾಗೂ ನಿಕೃಷ್ಟತೆಗಳನ್ನು ಅವಲಂಬಿಸಿರುತ್ತದೆ. ಮನುಷ್ಯನ ಭೌತಿಕ ವಯಸ್ಸು ಮತ್ತು ಬೌದ್ಧಿಕ ವಯಸ್ಸು ಒಂದಕ್ಕೊಂದು ಸಮಾನ ಪ್ರಮಾಣದಲ್ಲಿ ವಿಕಾಸ ಹೊಂದುವುದರಿಂದ ಅವನ ಬುದ್ಧಿಶಕ್ತಿ ಸ್ಥಿರವಾಗಿರುತ್ತದೆ. ಮನೋವಿಜ್ಞಾನಿಗಳ ಅಭಿಪ್ರಾಯದ ಪ್ರಕಾರ ಮಗುವಿನ ಬುದ್ಧಿಶಕ್ತಿ ಆರನೆಯ ವಯಸ್ಸಿನಲ್ಲಿ ಅತ್ಯಧಿಕ ತೀವ್ರತಮ ಗತಿಯಲ್ಲಿರುತ್ತದೆ. ಹನ್ನೆರಡನೇ ಹದಿನೈದನೆಯ ವಯಸ್ಸಿನವರೆಗೆ ತೀರ ಮಂದಗತಿಯಲ್ಲಿರುತ್ತದೆ. ಈ ಎಲ್ಲ ಮನೋವಿಕಾಸದ ಸಂಗತಿಗಳನ್ನು ಆಧರಿಸಿಯೇ ಜಿ.ಪಿ. ರಾಜರತ್ನಂ

ಅವರು ಅಪೂರ್ವವಾದ ಕಾಣಿಕೆಗಳನ್ನು ಮಕ್ಕಳ ಸಾಹಿತ್ಯಕ್ಕೆ ನೀಡಿದ್ದಾರೆ.
ವಸ್ತು ಅಥವಾ ವಿಷಯ ಇವುಗಳು ಒಂದೇ ರೀತಿಯ ಸಮನಾರ್ಥಕ ಶಬ್ಧಗಳು. ಮಕ್ಕಳ ಸಾಹಿತ್ಯದ ವಸ್ತು ಬಹುವಿಸ್ತಾರವಾದ ರೂಪವನ್ನು ಪಡೆದಿದೆ ಮಕ್ಕಳ ಸಾಹಿತ್ಯಕ್ಕೆ ಇಂಥದೇ ವಸ್ತು ಇರಬೇಕೆಂಬ ಕಟ್ಟಳೆ ಇಲ್ಲ. ಈಗಾಗಲೇ ಎಷ್ಟೋ ಮಕ್ಕಳ ಸಾಹಿತಿಗಳು ಅನೇಕಾನೇಕ ವಸ್ತುಗಳನ್ನು ಬಳಸಿಕೊಂಡಿದ್ದಾರೆ. ಮಕ್ಕಳ ಕಥೆ, ಕವಿತೆಗಳ ಮೂಲಕ ಪರಿಚಯಿಸುವ ವಸ್ತು ಹಾಗೂ ವಿಷಯಗಳಲ್ಲಿ ಎಷ್ಟೇ ವೈವಿಧ್ಯತೆ ತರಲು ಯತ್ನಿಸಿದರೂ ಮಕ್ಕಳ ಪರಿಸರ ಮತ್ತು ಅವರ ಅರಿವು ಸೀಮಿತವಾಗಿರುವುರಿಂದ ಮಕ್ಕಳ ಲೇಖಕರು ಆ ವಲಯದೊಳಗಿನ ವಸ್ತು ವಿಷಯಗಳನ್ನೇ ಆಯ್ದುಕೊಳ್ಳವುದು ಅನಿವಾರ್ಯವಾಗುತ್ತದೆ. ಆದರೆ ಜಿ.ಪಿ ರಾಜರತ್ನಂ ರವರು ಮಾತ್ರ ಈ ಹಳೆಯ ಉದಾಹರಣೆಗಳಿಗೇನೇ ಹೊಸ ತನದ ಕವಚ ಧರಿಸಿ ತಮ್ಮ ಸಾಹಿತ್ಯದಲ್ಲಿ ಬಳಸಿಕೊಂಡದ್ದು. ವಿಶೇಷತೆ.

**ಉದಾ:** ಅಪ್ಪ, ಅಮ್ಮ, ತಮ್ಮ, ತಂಗಿ, ಗುರುಗಳು, ಗೆಳೆಯ, ಗೆಳತಿ,ಅಕ್ಕ, ಅಜ್ಜಿ, ಅಜ್ಜಾ, ಮುಂತಾದ ಆಪ್ತ ವ್ಯಕ್ತಿಗಳು,ಶಾಲೆ ಪಾಟಿಚೀಲ, ಪುಸ್ತಕ, ಹೋಂವರ್ಕ್ ಆಟೋರಿಕ್ಷಾ, ಮುಂತಾದ ವಸ್ತುಗಳು,ಕ್ರೀಕೇಟ್, ಜೋಕಾಲಿಯಂಥಹ ಆಟಗಳು, ಪೆಪ್ಪರಮೆಂಟು, ಬೆಂಬೈಮಿಟಾಯಿ, ಸಿಹಿ ತಿಂಡಿಗಳು, ಪ್ರಾಣಿ ಪಕ್ಷಿಗಳಾದ ಬೆಕ್ಕು, ನಾಯಿ,ಆನೆ, ಮೊಲ, ನರಿ,ಇಣಚಿ, ಆಮೆ ಕಾಗೆ, ಕೋಗಿಲೆ, ಬಾವಲಿ, ಹಕ್ಕಿಗೂಡುಗಳು, ಪಾಶ್ಚಾತ್ಯ ಸಂಸ್ಕೃತಿ ಹಾಗೂ ಅಲ್ಲಿನ ಪರಿಸರ ಮುಂತಾದವುಗಳನ್ನು ತಮ್ಮ ಮಕ್ಕಳ ಸಾಹಿತ್ಯದಲ್ಲಿ ರಾಜರತ್ನಂ ಅವರು ಸಮರ್ಥವಾಗಿ ಬಳಸಿಕೊಂಡಿದ್ದಾರೆ.
ಮಕ್ಕಳ ಕಾವ್ಯದಲ್ಲಂತೂ ರಾಜರತ್ನಂ ಅವರ ವಸ್ತು ಮಕ್ಕಳಿಗೆ ಪರಿಚಿತವಾಗಿರುವುದನ್ನೇ ಬಳಸಿಕೊಂಡಿದ್ದಾರೆ. ಮಕ್ಕಳ ವಯೋಮತಿ ಹಾಗೂ ಅವರ ಆಸಕ್ತಿ–ಅಭಿರುಚಿಗಳನ್ನು ಗಮನದಲ್ಲಿರಿಸಿಕೊಂಡು ಕವನದ ವಸ್ತುವನ್ನು ಆಯ್ಕೆ ಮಾಡಿಕೊಂಡು ಅನೇಕ ಕವನಗಳನ್ನು ರಚಿಸಿದ್ದಾರೆ.
ಮಕ್ಕಳಿಗೆ ಆಡಲು ಏನೂ ಸಿಗದಿದ್ದಾಗ ತಾಯಿ ಒಗೆದು ಒಣಗಿ ಹಾಕಿದ ಹಳೆಯ ಬಟ್ಟೆಯ ತುಂಡನ್ನು ಅಥವಾ ತನ್ನ ಚಡ್ಡಿಯನ್ನೇ ತೆಗೆದುಕೊಂಡು ನೆಲಕ್ಕೆ ಬಡಿಯುತ್ತಾ ನೀರಿನಲ್ಲಿ ಎದ್ದುಯುವುದು. ಹಿಂಡುವುದು, ಅದರ ಮೇಲೆ ಹಾಸಿ ಕುಳಿತುಕೊಳ್ಳುವುದು, ಮಕ್ಕಳು ಆಡುವ ವಸ್ತು ಇಂಥಹದೇ ಇರಬೇಕೆಂಬ ನಿಯಮವಿಲ್ಲ ಎನ್ನುತ್ತಾರೆ ರಾಜರತ್ನಂ ಮಕ್ಕಳ ಕಲ್ಪನೆ ನಿಜಕ್ಕೂ ದೊಡ್ಡವರಿಗೂ ಬೆರಗುಗೊಳಿಸುವಂಥಹದ್ದು.

ನಕಲಿಯ ರಾಮಾಚಾರಿ
ಒಡುತ ನೆಗೆಯುತ ಹಾರಿ
ಕೋತಿಯ ಹಾಗೆ
ಹಾಕುವ ಲಾಗ
ಧುಡಮನೆ ಬಿದ್ದನು ಜಾರಿ(ಚುಟುಕ)

ಇಲ್ಲಿಯ ವಸ್ತುವಿನ ರೂಪವನ್ನು ಕಾಣಬಹುದು. ಮಕ್ಕಳ ಕಲ್ಪನೆ ಮತ್ತು ಬುದ್ಧಿಯ ಬಗ್ಗೆ ತಾವು ಗ್ರಹಿಸುವ ಈ ಕವನದಲ್ಲಿ ವಸ್ತುವಿನ ಹೊಸತನ ಮೋಜೆನಿಸುತ್ತದೆ.
ರಾಜರತ್ನಂ ಅವರು ಬರೆದ ಪದ್ಯಗಳಾಗಲೀ ಹಾಡು, ಕವನ, ಕಥೆಗಳಾಗಲೀ, ಮಕ್ಕಳಿಗೆ ನೀತಿಬೋಧಕವಾಗಿದ್ದು, ಭಕ್ತಿಯ ಭಾವ ತುಂಬಿ ಮನಸ್ಸಿಗೆ ಉಲ್ಲಾಸ ಕೊಡುವುದರ ಜೊತೆಗೆ ಉತ್ತಮ ಗುಣಗಳನ್ನು ಅಳವಡಿಸಿಕೊಳ್ಳಲು ಸಹಾಯಕವಾಗಿವೆ. ಸುಮಾರು ವರುಷಗಳಿಗಿಂತಲೂ ಹೆಚ್ಚಾಗಿ ಈ ರಚನೆಗಳು ಬಳಕೆಯಲ್ಲಿವೆ. ರಾಜರತ್ನಂ ಅವರ ತಂದೆ ಗೋಪಾಲಕೃಷ್ಣ ಅಯ್ಯಂಗಾರರ, ಒಲವು–ನಲುವುಗಳನ್ನು ಚೆನ್ನಾಗಿ ರಾಜರತ್ನಂ ಅರಿತುಕೊಂಡಿದ್ದರು. ಅವರು ಮಕ್ಕಳ ಅಕ್ಷರ ಕಲಿಕೆಗಾಗಿ ಸಾಕಷ್ಟು ಕವಿತೆಗಳನ್ನು ರಚಿಸಿದ್ದಾರೆ.

ಯೌವನದ ಕಾಲದಲಿ
ಮೌನವೇ ಮೇಲು
ಹೌದೌದು ಮಗು, ಅದೇ
ಗೌರವದ ಕೀಲು

ಈ ಒಂದು ಪದ್ಯವು ಮಕ್ಕಳಿಗೆ ಐ, ಮತ್ತು ಔ, ಎಂಬ ಸಧ್ಯಕ್ಷರಗಳನ್ನು ಕಲಿಸುವ ಪದ್ಯವಾಗಿದೆ. ಇಲ್ಲಿ ರಾಜರತ್ನಂ ಅವರ ಜಾಣ್ಮೆಯನ್ನು ಮೆಚ್ಚಲೇಬೆಕಾದದ್ದು. ಸೂರ್ಯಚಂದಿರರ ವಿಷಯ ಕುರಿತು ಸಾಕಷ್ಟು ಕವನ, ಕಥೆಗಳು, ಈಗಾಗಲೇ ಬಂದಿವೆ. ಆದರೆ ರಾಜರತ್ನಂ ಅವರು ಇತರರಿಗಿಂತ ಭಿನ್ನವಾದ ಭಾವನೆಗಳನ್ನು ಸೂರ್ಯ ಚಂದಿರ ಬಗ್ಗೆ ವ್ಯಕ್ತಪಡಿಸಿದ್ದಾರೆ.

ಕೋಳಿ ಕೂಗಿತೇಳು ಕಂದ!
ಸೂರ್ಯ ಪೂರ್ವದಲ್ಲಿ ಬಂದ
ಹೆಚ್ಚು ಮಲಗಲೇನು ಚಂದ?
ಬಾ! ಕಂದ ಬಾ!
ಚಂದ್ರನು ಗಗನಕೆ ಬಂದರೆ ಸಾಕು
ಸೂರ್ಯನು ಮರೆಯಲಿ ಅಡಗುವನು
ಭಾವನು ಊರಿಗೆ ಬಂದರೆ ಸಾಕು
ಅಕ್ಕನು ಮರೆಯಲಿ ಅಡಗುವಳು.
ಚಂದ್ರನು ಗಂಡ ! ಸೂರ್ಯನು ಹೆಂಡತಿ!
ಮಕ್ಕಳು ಗೊತ್ತೇ ಯಾರೆಂದು?
ಆಕಾಶದಲಿವೆ ಅವರಾ ಮಕ್ಕಳು
ಮಿನುಗುವ ಸಾವಿರ ನಕ್ಷತ್ರ.

ಹೀಗೆ ವಸ್ತುವಿನಲ್ಲಿ ವೈವಿಧ್ಯತೆಯನ್ನು ಅಳವಡಿಸಿಕೊಂಡು ಮಕ್ಕಳ ಮನಕ್ಕೆ ಮುಟ್ಟಿಸುವಲ್ಲಿ ಜಿ.ಪಿ.ರಾಜರತ್ನಂ ಅವರ ವೈಚಾರಿಕ ಮನೋಭಾವನೆಯ ಸೋಪಜ್ಞತೆ ಎದ್ದು ಕಾಣುತ್ತದೆ. ರಾಜರತ್ನಂ ಅವರು ತಮ್ಮ ಸಣ್ಣ–ಸಣ್ಣ ಪದ್ಯಗಳಿಗಾಗಿ ಆರಿಸಿಕೊಂಡ ವಸ್ತು ವಿಷಯ ಆಶ್ಚರ್ಯ ಹುಟ್ಟಿಸುತ್ತದೆ.

ಬೆಟ್ಟದ ಮೇಲಿನ ಭಟ್ಟನ ಹೊಟ್ಟೆ
ಹಿಂದಕೆ ಹೋಗದು ಮುಟ್ಟಿದರೆ!
ಅವನ ಗುಡಾಣದ ಡೊಳ್ಳಿನ ಹೊಟ್ಟೆ
ಖಣಿಖಣಿ ಎನ್ನುವುದು ಕುಟ್ಟಿದರೆ.

ಇಲ್ಲಿಯ ವಸ್ತುವಿನಲ್ಲಿ ಇರುವ ನವೀನ ದೃಷ್ಟಿ ನಿಜಕ್ಕೂ ಮೆಚ್ಚಲೇಬೇಕು ಈ ಒಂದು ಪದ್ಯ ಹಾಸ್ಯದ ಹೊನಲನ್ನು ಹರಿಸುತ್ತದೆ.

**ಭಾಷೆ**
'ಭಾಷೆ' ಎಂಬುದು 'ಮಾನವರಿಂದ ಮಾನವರಿಗಾಗಿ ಹುಟ್ಟಿದ ಪರಿಸರದ ಕೂಸು' ಭಾಷೆ ವ್ಯವಹಾರಕ್ಕಾಗಿರುವ ಒಂದು ಸಮರ್ಥ ಸಂವಹನ ಮಾಧ್ಯಮ. ಇದು ಏಕಕಾಲಕ್ಕೆ ವೈಯಕ್ತಿಕವೂ

ಸಾಮಾಜಿಕವೂ ಆಗಿರುವ ಪ್ರಯೋಜನಕಾರಿ ಮಾಧ್ಯಮ ಇದರ ಸಾಂಕೇತಿಕ ಧ್ವನಿ, ಸಾಮಗ್ರಿಯ ಸ್ವಚ್ಛಂದ ಬಳಕೆ ವ್ಯವಸ್ಥೆ ಉತ್ಪಾದಕತೆ ಮುಂತಾದವು ಇದರ ಪ್ರಮುಖ ಗುಣಲಕ್ಷಣಗಳು "ಶಿಲ್ಪಿಗೆ ಶಿಲೆ, ಚಿತ್ರಕಾರನಿಗೆ ರೇಖೆ ವರ್ಣಗಳು ಮಾಧ್ಯಮವಾಗುವಂತೆ ಸಾಹಿತಿಗೆ ತನ್ನಲ್ಲಿರುವ ಭಾವನೆಗಳ ಅಮೂರ್ತ ರೂಪಕ್ಕೆ ಮೂರ್ತರೂಪ ಕೊಡಲು ಭಾಷೆಯೇ ಮಾಧ್ಯಮವಾಗುತ್ತದೆ. ಸಾಹಿತ್ಯದಲ್ಲಿ ಭಾಷೆ ಸಮಕಾಲೀನ ಸಂದರ್ಭದ ಅನುಭವಕ್ಕೆ ಸಂವಾದಿಯಾಗಿರುವುದು. ಹೊಸ ಲಯಗಳನ್ನು ಹುಡುಕಿಕೊಳ್ಳಲು ಭಾವಾನಾತ್ಮಕತೆಯನ್ನು ಕಳೆದುಕೊಂಡು ವಿಶಿಷ್ಟ ಆ ಕಾರದಲ್ಲಿ ಮೂರ್ತಗೊಳ್ಳುವುದು.ಮುಂತಾದ ಶಕ್ತಿಯನ್ನು ಹೊಂದಿದ್ದರೂ ಪ್ರೌಢ ಸಾಹಿತ್ಯದ ಭಾಷೆಗೂ ಮಕ್ಕಳ ಸಾಹಿತ್ಯದ ಭಾಷೆಗೂ ಬಹಳಷ್ಟು ವ್ಯತ್ಯಾಸಗಳಿವೆ.

ರಾಜರತ್ನಂ ಅವರು ಮಕ್ಕಳಿಗಾಗಿ ಬರೆದ ಸಾಹಿತ್ಯದಲ್ಲಿ ಭಾಷೆಯನ್ನು ಚಿಕ್ಕ-ಚಿಕ್ಕ ಶಬ್ದ, ಚಿಕ್ಕ-ಚಿಕ್ಕ ವಾಕ್ಯ, ಪದಪುಂಜಗಳನ್ನು ಕ್ಲಿಷ್ಟತೆಯಿಲ್ಲದಂತೆ ಸಂಕೀರ್ಣವಾಗದಂತೆ ಸಹಜವಾಗಿ ಬಳಸಿದ್ದಾರೆ ಅವುಗಳ ಸಾಹಿತ್ಯ ಪ್ರಾಸಬದ್ಧತೆ, ಚಿಕ್ಕದರಲ್ಲಿಯೇ ಚೊಕ್ಕದಾಗಿ ಆಕರ್ಷಕವಾಗಿ ಇರಬೇಕೆಂದರು. ಇಂತಹ ಭಾಷೆಯ ಸಮರ್ಥ ಬಳಕೆಯನ್ನು ಜಿ.ಪಿ. ರಾಜರತ್ನಂ ರವರು ಸಾಹಿತ್ಯದಲ್ಲಿ ವ್ಯಾಪಕವಾಗಿ ನೋಡಬಹುದಾಗಿದೆ.

ಮಕ್ಕಳಿಗೆ ಶಿಶು ಪ್ರಾಸಗಳೆಂದರೆ ಆಟದ ಸಾಮಾನುಗಳಿಗಿಂತ ಹೆಚ್ಚು ಪ್ರೀತಿ. ಒಂದಲ್ಲ ಒಂದು ಪದ್ಯ ಅವರ ಬಾಯಲ್ಲಿ ಗುಣಗುತ್ತಿರುತ್ತದೆ. ರಾಜರತ್ನಂ ಅವರ ಶಿಶುಪ್ರಾಸಗಳು, ಪದ್ಯಗಳು ಪರಿಹಾಸ ಪ್ರವೃತ್ತಿಗೆ ಪಾಕೃತಿಕ ಪ್ರತಿಭೆಗೆ ಕಲ್ಪನಾ ಶಕ್ತಿಗೆ ನಿದರ್ಶನವಾಗಬಲ್ಲವು. ಮಗುವಿನ ಭಾಷೆ ದೈವದತ್ತವಾಗಿ ಬರುವದಿಲ್ಲ ಅದನ್ನು ತನ್ನ ಪರಿಸರದಿಂದ ಗಮನಿಸಿ ಕಲಿತುಕೊಳ್ಳುತ್ತದೆ. ಕಲಿತುಕೊಳ್ಳುವ ಕ್ರಿಯೆಯಲ್ಲಿ ಪೂರ್ವ, ಅರ್ಥದ ಗಮನವಿರುವುದಿಲ್ಲ ತಾನು ಕಂಡ ಪ್ರತಿಯೊಂದು ಪದಾರ್ಥಕ್ಕೆ ಒಂದೊಂದು ಪದವನ್ನು ಅಂಟಿಸುತ್ತದೆ ಮಗು ಹೊಸ-ಹೊಸ ಪದಗಳನ್ನು ಸೃಷ್ಟಿಸುತ್ತ ಹೋಗುತ್ತದೆ.

ಹೀಗಾಗಿ ಮಕ್ಕಳ ಭಾಷೆಯ ಕಲಿಕೆಯಲ್ಲಿ ಶಿಶುಪ್ರಾಸಗಳ ಪಾತ್ರ ಹಿರಿದಾಗಿರುತ್ತದೆ. ಎಂದು ರಾಜರತ್ನಂ ಅವರು ಹೇಳುತ್ತಾರೆ ಮಕ್ಕಳಿಗಾಗಿ ಪ್ರಾಕೃತ, ಸಂಸ್ಕೃತ, ಪಾಲಿ, ಪರ್ಷಿಯನ್, ಇಂಗ್ಲೀಷ್, ಈ ವಿವಿಧ ಭಾಷೆಗಳ ಸಾಹಿತ್ಯ ಸಾಗರದಲ್ಲಿರುವ ಮುತ್ತುಗಳನ್ನು ಆರಿಸಿ ಪದ್ಯ/ ಕಥೆಗಳನ್ನು ಕಟ್ಟಿ ಕನ್ನಡ ಮಕ್ಕಳಿಗೆ ನೀಡಿದ್ದಾರೆ.

ರಾಜರತ್ನಂ ಅವರ ಶಿಶುಗೀತೆಗಳು ಮಕ್ಕಳನ್ನು ಆಕರ್ಷಿಸಿ ಅವರ ಮನಸ್ಸನ್ನು ಅರಳಿಸುವಲ್ಲಿ ಅಪಾರ ಯಶಸ್ಸು ಪಡೆದಿವೆ. ಅದರ ಪ್ರಯೋಗಗಳು ಅಂದರೆ ಪದ್ಯದ ಭಾಷೆ ಸರಳ ಹಾಗೂ ನೇರ. ಮಕ್ಕಳ ಪ್ರಪಂಚವನ್ನು ಅವರ ಮನಸ್ಸನ್ನು ರಾಜರತ್ನಂ ಚೆನ್ನಾಗಿ ಬಲ್ಲರು ವರ್ಣನೆಯ ಅಬ್ಬರವಿಲ್ಲದೆ, ನೀತಿಯ ಭಾರ ಹೇರದೆ ಮಕ್ಕಳ ನೆನಪಿನಲ್ಲಿ ನಿಲ್ಲುವಂತೆ ಅವರು ಪದ್ಯಗಳನ್ನು ರಚಿಸಿದ್ದಾರೆ. ಮಕ್ಕಳ ಆಸಕ್ತಿ ಅಭಿರುಚಿಗೆ ಅನುಗುಣವಾಗಿ ಎಷ್ಟು ಸಾಧ್ಯವೋ ಅಷ್ಟರ ಮಟ್ಟಿಗೆ ಮಕ್ಕಳಿಗೆ ಹಿಡಿಸುವ ಸುಲಭ ಪ್ರಾಸಬದ್ಧ ಜೋಡಣೆ, ವಾಕ್ಯ ರಚನೆ, ಮಾಡಿದ್ದಾರೆ.

ರಾಜರತ್ನಂ ಅವರ ಸಾಹಿತ್ಯದಲ್ಲಿ ಗಮನ ಸೆಳೆಯುವ ಮತ್ತೊಂದು ಕಾವ್ಯ ಪ್ರಕಾರ 'ಚುಟುಕು' ಅದರಲ್ಲಿಅನೇಕರು ಕೈಹಾಕಿದ್ದಾರೆ ಬಗೆ-ಬಗೆಯ ಪ್ರಯೋಗ ನಡೆಸಿದ್ದಾರೆ. ಎರಡು ಪ್ರಾಸ, ನಾಲ್ಕು ಸಾಲು ಇಷ್ಟಿದ್ದರೆ ಒಂದು ಚುಟುಕ ಎಂದು ಅನೇಕರು ಭಾವಿಸಿದ್ದಾರೆ. ಪ್ರಕಾರದ ಸಫಲತೆ ಏನೇ ಇರಲಿ ಅದು ಜನಪ್ರಿಯವಾಗಿರುವುದಂತೂ ನಿಜ.

ಈ 'ಚುಟುಕು' ಪದವನ್ನು ಮೊದಲು ಬಳಸಿದವರು, ಪ್ರಯೋಗ ಮಾಡಿದವರು ರಾಜರತ್ನಂ ಎಂಬುದು ಅನೇಕರಿಗೆ ತಿಳಿದಿರಲಾರದು.

ದೊಡ್ಡ ಪಟ್ಟೆ ಹುಲಿ  
ಕಾಡುದಾರಿಯಲಿ  
ನಡುಗಿ ನಿಂತು  
ಹೇಳಿತಿಂತು.  
'ಅಯ್ಯೋ ಅಪ್ಪ ಚಳಿ!

ಇದು ರಾಜರತ್ನಂ ಅವರ ಮೊದಲ ಚುಟಕು, ಇದು ಹೋರನೋಟಕ್ಕೆ ತುಂಬ ಸುಲಭವಾಗಿ ಕಾಣುವ ರಚನೆ. ಆದರೆ ರಾಜರತ್ನಂ ಅವರೇ ಹೇಳುವಂತೆ "ಮೂರು ಪಾದಗಳ ಕೊನೆಗೆ ಎರಡು ಲಘು ತರುವುದೂ, ಪ್ರಾಸಗಳನ್ನು ಕಾಪಾಡುವುದೂ ಐದೇ ಪಂಕ್ತಿಗಳಲ್ಲೂ ಒಂದು ಅರ್ಥವನ್ನು ಪೂರೈಸುವುದೂ ಕಣ್ಣಿಗೆ ಕಾಣುವಷ್ಟು ಸುಲಭವಲ್ಲ.

ರಾಜರತ್ನಂ ಅವರ ಸಾಹಿತ್ಯದಲ್ಲಿ ಗಮನ ಸೆಳೆಯುವ ಮತ್ತಷ್ಟು ಅಂಶಗಳೆಂದರೆ ಅವರು ಭಾಷೆಯಲ್ಲಿ ನೀಡುವ ಶಬ್ದ ಸೃಷ್ಠಿ ಶಬ್ದ ಆಯ್ಕೆ ಇವು ಮಕ್ಕಳ ಕಲ್ಪನಾ ಶಕ್ತಿಗನುಗುಣವಾಗಿ ಮೂಡಿ ಬಂದಿವೆ. ಮಕ್ಕಳು ಹೆಚ್ಚು ಇಷ್ಟುಪಡುವ ಪ್ರಾಣಿ-ಪಕ್ಷಿಗಳ ಹೆಸರುಗಳನ್ನು ವಿಶೇಷವಾಗಿ ವಿಶಿಷ್ಟ ಬಗೆಯಲ್ಲಿ ಬಳಸಿರುವುದು ಮಕ್ಕಳಿಗೆ ಖುಷಿ ನೀಡುತ್ತವೆ.

**ಶೈಲಿ:** ಶೈಲಿ, ಇದು ಒಬ್ಬನನ್ನು ಅವನ ಬರವಣಿಗೆಯ ಮೂಲಕವಾಗಿ ಇವನು ಕವಿ, ಇವನು ಸಾಹಿತಿ, ಇವನು ಲೇಖಕ, ಎಂಬುದನ್ನು ಎತ್ತಿ ತೋರಿಸುತ್ತದೆ. ಮಾನವನಿಗೆ ವ್ಯಕ್ತಿತ್ವವಿದ್ದಂತೆ, ಸಾಹಿತ್ಯಕ್ಕೆ **'ಶೈಲಿ'** ಕೆಲವೇ ಶಬ್ದಗಳಲ್ಲಿ ಧ್ವನಿಸುವಂತೆ ಹಿಡಿದಿಡಲಾಗದ ವಿಷಯಗಳಲ್ಲಿ ಶೈಲಿಯೂ ಒಂದು. 'ಅತೀ ಸಂಕ್ಷಿಪ್ತ ಮತ್ತು ಅತಿ ವ್ಯಾಪ್ತಿ ವಿವರಗಳನ್ನು ಒಳಗೊಂಡ ಶಬ್ಧವೇ ಶೈಲಿ.

ಇಂಗ್ಲೀಷ 'ಖಣಥಿಟಜ' ಎನ್ನುವ ಪದವನ್ನು ಕನ್ನಡದಲ್ಲಿ 'ಶೈಲಿ' ಎಂದು ಕರೆಯಲಾಗುತ್ತದೆ. ಈ ಶೈಲಿ ಎನ್ನುವ ಪದ ಸಾಹಿತ್ಯ ಮೀಮಾಂಸೆಯ ಪರಿಭಾಷೆಯಲ್ಲಿ ಬಳಕೆಯಾದಾಗ ತೊಡಗಿದ ಕನ್ನಡದ ಪಟ್ಟಿಗೆ ತೀರಾ ವಿರಳ ಈಚೆಗೆ 'ಶೈಲಿ' ಎಂಬ ಪದ ಬಳಕೆಯಾಗಿರುವದು. ಬರೆಯುವವನ ಅಥವಾ ಮಾತನಾಡುವವನ ಭಾವನೆಗಳನ್ನು, ಓದುವವನ ಕೇಳುವವನ ಮನ ಒಲಿಸುವಂತೆ ಹೇಳುವ ರೀತಿ ಶೈಲಿಯಾಗಿರುತ್ತದೆ. ಮಕ್ಕಳ ಸಾಹಿತ್ಯವೇ ಆಗಿರಲಿ ಪ್ರೌಢ ಸಾಹಿತ್ಯವೇ ಇರಲಿ, ಶೈಲಿ, ಭಾವನೆ, ಕಲ್ಪನೆಗಳು ಅಭಿವ್ಯಕ್ತಿಸುವ ಸಾಧನ ಅಥವಾ ಉಪಕರಣ ಈ ಸಾಧನೆಯನ್ನು ಭಾಷೆಯ ಅಥವಾ ಇನ್ನಾವುದೇ ಮಾಧ್ಯಮದಿಂದ ಅಭಿವ್ಯಕ್ತಿಸಿದಾಗ ಆ ಮಾಧ್ಯಮವನ್ನು ಕಲಾವಿದನು ಕಟ್ಟಿದ ಬಗೆ ಬಳಸಿದ ರೀತಿಗಳನ್ನು ಎತ್ತಿ ಹೇಳುತ್ತದೆ.

ರಾಜರತ್ನಂ ಅವರ ಮಕ್ಕಳ ಸಾಹಿತ್ಯದ ಶೈಲಿ ತುಂಬಾ ವಿಶಿಷ್ಟವಾದುದು.

ತುಂಟ ಮಲ್ಲ  
ದೊಡ್ಡ ಕಲ್ಲ  
ದಾರಿಗಡ್ಡ ಹಾಕಿದ !  
ತಿರುಗಿ ಜಾಣ  
ಏಕೊ ಕಾಣೆ!  
ಪಕ್ಕಕದನೆ ನೂಕಿದ !

ಇಲ್ಲಿ ರಾಜರತ್ನಂ ಹೇಳು ರೀತಿ, ವಿಧಾನ, ಮಗುವಿಗೆ ರಂಜಕವಾಗುವ ರೀತಿಯಲ್ಲಿದೆ. ತುಂಟ ಮಲ್ಲ ಆಡುತ-ಕೂಡುತ ದಾರಿಗಡ್ಡ ಹಾಕಿದ! ಇಲ್ಲಿಯ ಧ್ವನಿ ಸಂಯೋಜನೆ ಮಕ್ಕಳಿಗೆ ಮೋಡಿ ಹಾಕಿಬಿಡುತ್ತದೆ.

ರಾಜರತ್ನಂ ಅವರ ಮಕ್ಕಳ ಕಾವ್ಯದಲ್ಲಿ ಪದಗಳ ಆಯ್ಕೆ ಹಾಗೂ ಸಂಯೋಜನೆ ಇವೆರಡರಲ್ಲೂ ಸಮನ್ವಯ ಕಂಡು ಬರುತ್ತದೆ.

ನಾಯಿ ಮರಿ! ನಾಯಿಮರಿ!
ತಿಂಡಿ ಬೇಕೆ?
'ತಿಂಡಿ ಬೇಕು ! ತೀರ್ಥ ಬೇಕು!
ಎಲ್ಲ ಬೇಕು!
ನಾಯಿ ಮರಿ ! ನಿನಗೆ ತಿಂಡಿ
ಏಕೆ ಬೇಕು?

ಇಲ್ಲಿಯ ಪದಗಳ ಆಯ್ಕೆ ಮತ್ತು ಸಂಯೋಜನೆ ಇವೆರಡಲ್ಲೂ ಶೈಲಿ/ರೀತಿ ಹೆಚ್ಚು ವಿಸ್ತಾರವಾಗಿ ಹೇಳುವುದು ಅವಶ್ಯಕತೆ ಇರುವುದಿಲ್ಲ ಎನ್ನುತ್ತಾರೆ. ಇಲ್ಲಿಯ ಕಾವ್ಯ ಭಾಷೆಯ ಲಕ್ಷಣವೊಂದನ್ನು ಇನ್ನೊಂದು ಪರಿಕಲ್ಪನೆಯ ಮೂಲಕ ಮೇಳೈಸಿ ಹೇಳುವುದು ಮತ್ತು ಮಗು ನಾಯಿಯನ್ನು ಪ್ರಶ್ನೆ? ಮಾಡುವುದು ಗಮನ ಸೆಳೆಯುತ್ತದೆ. ಭಾವ-ಭಾಷೆಗಳ ಸುಮಧುರ ಸಾಮರಸ್ಯವನ್ನು ರಾಜರತ್ನಂ ಅವರು ತಮ್ಮ ಕಾವ್ಯದಲ್ಲಿ ಕಾಪಾಡಿಕೊಂಡಿದ್ದಾರೆ.

ತೂಗು ತೊಟ್ಟಿಲನು ತೂಗು ತೊಟ್ಟಿಲನು
ನಮ್ಮ ಜಾಣಮರಿ ಮಲಗಲಿ
ತೂಗು ತೊಟ್ಟಿಲನು ಲಾಲಿ ಹೇಳುತಲಿ
ಸಣ್ಣರಾಗದಲಿ ದನಿಯಲಿ.
(ತೂಗು ತೊಟ್ಟಿಲನು)

ಇಲ್ಲಿ ಭಾವ ಮತ್ತು ಭಾಷೆಗಳು ಸಮನ್ವಯಗೊಂಡಿರುವುದರಿಂದ ಕವಿತೆಯಲ್ಲಿ ತಾಳ-ಲಯ, ಗತಿಗಳಿಗೆ ಕುಂದುಂಟಾಗಿಲ್ಲ. ರಾಜರತ್ನಂ ಕಾವ್ಯದಲ್ಲಿ ಶಬ್ದ ವೈವಿಧ್ಯ ವಿಫುಲವಾಗಿದೆ. ಶಬ್ದಗಳಲ್ಲಿ ಕವಿತೆಯ ಚಿತ್ರಣವನ್ನು ಬಿಡಿಸುತ್ತದೆ. ಇಂತಹ ಸಾರ್ಥಕ ಸಾಲುಗಳು ಅಲ್ಲಲ್ಲಿ ಬಹಳಷ್ಟು ಕಂಡು ಬರುತ್ತವೆ.
ಮೋಡದ ಮಳೆಯು ಬರುವ ಚಿತ್ರಣವನ್ನು ರಾಜರತ್ನಂ ಅವರು ಮಕ್ಕಳಿಗೆ ತುಂಬಾ ಸೊಗಸಾಗಿ ಚಿತ್ರಿಸಿದ್ದಾರೆ.

ಬಳ ಬಳ ಬಳ ಮಳೆ ಸುರಿಸಿತು
ಆಕಾಶದಲ್ಲಿ ನಲ್ಲಿ
ಬುಳು ಬುಳು ಬುಳು ಚಳಿ ಬೆಳೆಯಿತು
ಮೈ ಮನಸುಗಳಲ್ಲಿ
ಗುಡು ಗುಡು ಗುಡು ಗುಡುಗೊಂದಿಗೆ
ಸಿಡಿಲೆರಗುವ ಸದ್ದು!
ಎಳೆ ಎಳೆ ಎಳೆ ಮಳೆ ಸೋರುವ
ಹನಿಯಾಗುವ ಮುದ್ದು !

ಹೀಗೆ ಪ್ರಕೃತಿಯ ಮತ್ತು ನಿಸರ್ಗದ ಸಡಗರ ಮಧ್ಯ ಮಳೆಯ ವರ್ಣನೆ ನೀಡಿದ್ದಾರೆ. ರಾಜರತ್ನಂ ಅವರು ಒಂದೇ ವಸ್ತುವನ್ನು ಬೇರೆ -ಬೇರೆ ತಂತ್ರಗಳನ್ನು ಬಳಸಿ ಕವನಗಳನ್ನು ಚುಟುಕಗಳನ್ನು ಬರೆದಿದ್ದಾರೆ.

**ಉಪಸಂಹಾರ**

ರಾಜರತ್ನಂ ಅವರು ತಮ್ಮ ಶಿಶಿಪ್ರಾಸ ಮತ್ತು ಪದ್ಯಗಳಿಗೆ ಆರಿಸಿಕೊಳ್ಳುವ ವಿಷಯಗಳೇ ವಿಶಿಷ್ಟವಾದವುಗಳು ಉದಾ:- ವಾರಕ್ಕೇ ಏಳೇ ಏಳು ದಿನ, ಕರ್‍ರಗಿರುವ ಕಾಗೆ ತುತ್ತೂರಿ, ಕಳ್ಳ ರಂಗಪ್ಪ, ಕಿಟ್ಟನ ಕುಣಿತ, ಕೂಸುಮರಿ,ಕುದುರೆ ಸವಾರಿ, ನಾಯಿಮರಿ, ಕಡಲೆಪುರಿ, ಹತ್ತು ಮಕ್ಕಳು ಇತ್ಯಾದಿ ಕುತೂಹಲ ವಸ್ತುಗಳನ್ನು ಶೀರ್ಷಿಕೆಗಳನ್ನು ಆರಿಸಿಕೊಂಡು ಅವುಗಳ ನಿರೂಪಣೆಯಲ್ಲಿ ಹೊಸ ತಂತ್ರವನ್ನು ಉಪಯೋಗಿಸಿದ್ದಾರೆ.
ಒಟ್ಟಾರೆಯಾಗಿ ರಾಜರತ್ನಂ ಅವರ ಪದ್ಯಗಳ ವಸ್ತು, ಶೈಲಿ, ತಂತ್ರಗಳನ್ನು ಗಮನಿಸಿದಾಗ ಅವರದೇ ಆದ ಒಂದು ವಿಶಿಷ್ಟ ಛಾಪು ಎದ್ದು ಕಾಣುತ್ತದೆ.

**ಪರಾಮರ್ಶನ ಗ್ರಂಥಗಳು**

1. ಕಂದನ ಕಾವ್ಯಮಾಲೆ ಮತ್ತು ಮಕ್ಕಳ ಗಾಂಧಿ ಡಾ॥ ಜಿ.ಪಿ. ರಾಜರತ್ನಂ
2. ನಿಮ್ಮ ಮಕ್ಕಳಿಗೆಂತಹ ಸಾಹಿತ್ಯ ಬೇಕು? ಡಾ॥ ನಿರಿಪಮಾ
3. ಮಕ್ಕಳ ಸಾಹಿತ್ಯ ಹಾಗೂ 'ಸಿಸು' ಸಂಗಮೇಶ -ರಾಜೇಂದ್ರ ಗಡಾದ
4. ಮಕ್ಕಳ ಕಾವ್ಯ – ಎ.ಕೆ. ರಾಮೇಶ್ವರ
5. ಶ್ರೇಷ್ಠ ಶಿಶು ಸಾಹಿತಿಗಳು – ಜಯವಂತ ಕಾಡದೇವರ
6. ಶತಮಾನದ ಮಕ್ಕಳ ಸಾಹಿತ್ಯ -ರಘುನಾಥ ಎಮ್. ಎಸ್.
7. ಭಾರತೀಯ ಮಕ್ಕಳ ಸಾಹಿತ್ಯ ಸಮೀಕ್ಷೆ -ಡಾ ನಿರಿಪಮಾ
8. ಸಮಗ್ರ ಮಕ್ಕಳ ಕವಿತೆಗಳು – ಟಿ.ಎಸ್. ನಾಗರಾಜ ಶೆಟ್ಟಿ
9. ಸಮಗ್ರ ಮಕ್ಕಳ ಸಾಹಿತ್ಯ ಡಾ॥ಜಿ.ಪಿ.ರಾಜತರ್‍ನಂ